**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-04, ಯಲಹಂಕ, ಬೆಂಗಳೂರು-64**

ನಮೂನೆ-1 (ನಿಯಮ-7)

**ಕರ್ನಾಟಕ ಶಿಕ್ಷಣ ಕಾಯಿದೆ ಜಾರಿಗೆ ಬಂದಾಗ ಅಸ್ತಿತ್ವದಲ್ಲಿದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ಪ್ರಮಾಣ ಪತ್ರ**

ದಿನಾಂಕ:27-07-2018

ಸಂಖ್ಯೆ:ಕ್ಷೇ.ಶಿ.ಶಾ.ಮಾ.ನ.58/2018-19

ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠ, ಗದಗ-582101, ಈ ಆಡಳಿತ ಮಂಡಳಿ ವತಿಯಿಂದ ನಡೆಯುತ್ತಿರುವ ಸಂಪಿಗೆ ಮಹಾರುದ್ರಯ್ಯ ಆಂಗ್ಲ ಮಾಧ್ಯಮ ಶಾಲೆ, ಚಿಕ್ಕಬಾಣಾವರ, ಕೆಂಪಾಪುರ ರಸ್ತೆ, ಬೆಂಗಳೂರು, ಈ ಶಾಲೆಗೆ ತಾತ್ಕಾಲಿಕವಾಗಿ ಮಾನ್ಯತೆಯನ್ನು ಅನುದಾನವಿಲ್ಲದೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ತಾತ್ಕಾಲಿಕವಾಗಿ ಕರ್ನಾಟಕ ಶಿಕ್ಷಣ ಸಂಹಿತೆ ನಿಯಮ-36(6)(ಬಿ) ಯಂತೆ ಮಾನ್ಯತೆ ನೀಡಿದೆ.

| ಮಾನ್ಯತೆ ನವೀಕರಿಸಬೇಕಾದ ವರ್ಷ | ಮಾನ್ಯತೆ ನವೀಕರಿಸಬೇಕಾದ ವಿಭಾಗಗಳು | ಶಾಲೆಯುಯಾವ ವರ್ಗಕ್ಕೆ ಸೇರಿದೆ | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಪರಿಶೀಲನಾಧಿಕಾರಿಯವರ ಹೆಸರು |
|---|---|---|---|
| 2018-19ನೇ ಸಾಲಿಗೆ 6ನೇ ತರಗತಿಗೆ ಪ್ರಥಮ ಮಾನ್ಯತೆ ಹಾಗೂ ಮುಂದಿನ ಐದು ವರ್ಷಗಳಿಗೆ 1 ರಿಂದ 8ನೇ ತರಗತಿಗೆ ಮಾನ್ಯತೆ ನೀಡಿದೆ | 1 ರಿಂದ 8ನೇ ತರಗತಿಗೆ ತಲಾ ಒಂದೊಂದು ವಿಭಾಗಗಳಿಗೆ ಆಂಗ್ಲ ಮಾಧ್ಯಮದಲ್ಲಿ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನವೀಕರಿಸಿದೆ. | ಸಾಮಾನ್ಯವರ್ಗ | ಕ್ಷೇತ್ರ ಶಿಕ್ಷಣಾಧಿಕಾರಿಗಳು ಉತ್ತರ ವಲಯ-04 ಯಲಹಂಕ |

**ಷರತ್ತುಗಳು:-**

1. ಕರ್ನಾಟಕ ಶಿಕ್ಷಣ ಸಂಹಿತೆ ಮತ್ತು ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ನೇಮಕಾತಿಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಇಡಿ 59 ವಿವಿಧ 99 ದಿನಾಂಕ:2/2/2000ರಂತೆ ಮಾಡಬೇಕಾಗುವುದು.
3. ಶಾಲೆಯ ಸಿಬ್ಬಂದಿ ರಚನೆಯು ಮೇಲ್ಕಂಡ ಸರ್ಕಾರಿ ಆದೇಶದನ್ವಯ ಇರಬೇಕು.
4. ಶಾಲೆ ನಡೆಸಲು ಅಗತ್ಯವಾದ ಸ್ಥಳಾವಕಾಶ, ಪೀಠೋಪಕರಣ, ಪಾಠೋಪಕರಣ ಹಾಗೂ ಆಟದ ಮೈದಾನ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು.
5. ಶಾಲೆಯಲ್ಲಿ ಸರ್ಕಾರಿ ಆದೇಶದ ಸಂಖ್ಯೆ: ಇಡಿ 59 ವಿವಿಧ 99 ದಿನಾಂಕ: 2/2/2000 ರ ಅನುಚ್ಛೇಧ-4, ನಿಯಮ-3 ರಂತೆ ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ ಇರತಕ್ಕದ್ದು.
6. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕಪತ್ರಗಳನ್ನು ನಿರ್ವಹಿಸಿ, ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರು ಪಡಿಸುವುದು
7. ಇಲಾಖೆಯ ಪೂರ್ವಾನುಮತಿ ಪಡೆಯದೇ ಹೆಚ್ಚಿನ ತರಗತಿ/ವಿಭಾಗಗಳನ್ನು ತೆರೆಯದಾರದು.
8. ಹಿಂದಿನ ಸಾಲಿನವರೆಗಿನ ಲೆಕ್ಕಪತ್ರಗಳನ್ನು ನೊಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪ್ರತಿ ಸಲ್ಲಿಸಬೇಕು.
9. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ ಸ್ಥಿರ ನಿಧಿ ಇಡಬೇಕು.
10. ಇಲಾಖೆಯು ನಿರ್ಧರಿಸಿರುವ ಪಠ್ಯಪುಸ್ತಕಗಳನ್ನೇ ಬೋಧಿಸಬೇಕು.

(ನಾರಾಯಣ)
ಕ್ಷೇತ್ರಶಿಕ್ಷಣಾಧಿಕಾರಿಗಳು
ಉತ್ತರ ವಲಯ-04, ಯಲಹಂಕ

**ಪ್ರತಿಗಳು:-**

1. ಕಾರ್ಯದರ್ಶಿಗಳು, ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠ, ಗದಗ-582101.
2. ಮುಖ್ಯ ಶಿಕ್ಷಕರು, ಸಂಪಿಗೆ ಮಹಾರುದ್ರಯ್ಯ ಆಂಗ್ಲ ಮಾಧ್ಯಮ ಶಾಲೆ, ಚಿಕ್ಕಬಾಣಾವರ, ಕೆಂಪಾಪುರ ರಸ್ತೆ, ಬೆಂಗಳೂರು.
3. ಕಛೇರಿ ಪ್ರತಿ.

Scanned with OKEN Scanner